**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ.8/2021**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ಧ-

ಆರೋಪಿ/ತರು ಃ ಜವರಯ್ಯ ಮತ್ತು ಇತರರು

-ಃದೋಷಾರೋಪಣೆಃ-

ಶ್ರೀ ನಂಜೇಗೌಡ ಎಂ.ಸಿ., ಬಿ.ಎ.ಎಲ್., ಎಲ್.ಎಲ್.ಎಂ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ಜವರಯ್ಯ ಬಿನ್ ವರದಯ್ಯ, 70 ವರ್ಷ, ವಾಸಃರಂಗಾಪುರ, ತರೀಕೆರೆ ತಾಃ, ಚಿಕ್ಕಮಗಳೂರು ಜಿಲ್ಲೆ.
2. ಉಮೇಶ ಕೋಂ ವರದಯ್ಯ, 37 ವರ್ಷ, ವಾಸಃರಂಗಾಪುರ, ತರೀಕೆರೆ ತಾಃ, ಚಿಕ್ಕಮಗಳೂರು ಜಿಲ್ಲೆ.
3. ಶ್ರೀಮತಿ ಆಶಾ ಕೋಂ ಉಮೇಶ, 32 ವರ್ಷ, ವಾಸಃರಂಗಾಪುರ, ತರೀಕೆರೆ ತಾಃ, ಚಿಕ್ಕಮಗಳೂರು ಜಿಲ್ಲೆ.
4. ಶ್ರೀಮತಿ ಲಕ್ಷ್ಮಮ್ಮ ಕೋಂ ವರದಯ್ಯ, 60 ವರ್ಷ, ವಾಸಃರಂಗಾಪುರ, ತರೀಕೆರೆ ತಾಃ, ಚಿಕ್ಕಮಗಳೂರು ಜಿಲ್ಲೆ.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿಃ13.07.2020 ರಂದು ಬೆಳಿಗ್ಗೆ 10-00 ರ ಸಮಯದಲ್ಲಿ ತರೀಕೆರೆ ಠಾಣಾ ಸರಹದ್ದಿನ ಹೆಚ್ ರಂಗಾಪುರ ಗ್ರಾಮದ ಚಾಸಾ-4 ರವರ ಮನೆಯ ಮುಂಭಾಗದಲ್ಲಿನ ಕಾಂಕ್ರೀಟ್ ರಸ್ತೆಯಲ್ಲಿ 1 ನೇ ಆರೋಪಿ ಸದರಿ ಸ್ಥಳದಲ್ಲಿನ ಚರಂಡಿಗೆ ಕಸಕಡ್ಡಿಯನ್ನು ಹಾಕಿ ಮೂತ್ರ ವಿಸರ್ಜನೆ ಮಾಡಿದಾಗ ಚಾಸಾ-4 ರವರು ಗಲೀಜು ಮಾಡಬೇಡ ಎಂದು ಹೇಳಿದ್ದಕ್ಕೆ 1 ನೇ ಆರೋಪಿ ಚಾಸಾ-4 ರವರಿಗೆ ನಾನು ಕಸಕಡ್ಡಿಯನ್ನು ಇಲ್ಲಿಯೇ ಹಾಕುತ್ತೇನೆ, ನೀನು ಯಾವನು ನನಗೆ ಕೇಳುವುದ್ದಕ್ಕೆ ಬೋಸೂಡಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ ಇತರ ಆರೋಪಿತರಾದ ನೀವು ಸಹಾ ಅವಾಚ್ಯವಾಗಿ

ಬೈದಿದ್ದು,  ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.504 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ-4 ರವರ ಬಲಗೈಗೆ ಹೊಡೆದು ನಂತರ 2 ನೇ ಆರೋಪಿಯಾದ ನೀವು ಅದೇ ದೊಣ್ಣೆಯಿಂದ ಚಾಸಾ-5 ರವರಿಗೂ ಸಹಾ ಬಲಕೈಗೆ ಹೊಡೆದು ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು,  ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.326 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಆರೋಪಿತರಾದ ನೀವು ಚಾಸಾ-1 ರವರಿಗೆ ಕೊಲೆ ಬೆದರಿಕೆಯನ್ನು ಹಾಕಿದ್ದು,  ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.506 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ

Sd/-
(ನಂಜೇಗೌಡ ಎಂ.ಸಿ.)
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ

ಎ-1

ಎ-2

ಎ-3

ಎ-4

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ

ಎ-1

ಎ-2

ಎ-3

ಎ-4

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ

Sd/-

ಹಿ. ಪ್ರಧಾನ ಪ್ರ.ದ.ನ್ಯಾದಂ ತರೀಕೆರೆ.

ಆರೋಪಿತರ ಸಹಿಃ